ತೋರಿಸಲಾರಂಭಿಸಿದಾಗ ನನಗೆ ಆನಂದವೋ ಆನಂದ! ನನ್ನ ಅಪ್ಪಅಮ್ಮಂದಿರಿಗೆ ನಮ್ಮ ಅನುತಾಯಿ ಥರಾನೆ ಎಂದು ಮಗಳ ಬಾಲ್ಯವನ್ನು ಮತ್ತೆ ಕಂಡಷ್ಟೇ ಸಂಭ್ರಮ! ವಿಭಾಳ ಶಿಶುವಿಹಾರದ ಮೊದಲನೇ ವರ್ಷ ಶಾಲೆಯಲ್ಲಿ ಕನ್ನಡ ಪದ್ಯಗಳನ್ನು ಹೇಳಿಕೊಡಲಿಲ್ಲವೆಂದು ಆತಂಕಪಡುತ್ತಿದ್ದ ನನಗೆ, ಎರಡನೇ ವರ್ಷದ ಮಳೆಗಾಲದ ಹೊತ್ತಿಗೆ ಶಾಲೆಯಿಂದ ಬಂದು ಗೂಡು ಸೇರುತ್ತಿದ್ದ ನನ್ನ ಪುಟ್ಟಹಕ್ಕಿ ಮುದ್ದಾಗಿ 'ಮಳೆ ಬಂತು ಮಳೆ, ಕೊಡೆ ಹಿಡಿದು ನಡೆ' ಎಂದು ಅಭಿನಯಸಮೇತ ಹಾಡಲಾರಂಭಿಸಿದಾಗ ಅವರ್ಣನೀಯ ಆನಂದವಾಗುತ್ತಿತ್ತು.

ಮಳೆಗಾಲಗಳು ಕಳೆದಂತೆ ಬೆಂಗಳೂರಿನ ಮಳೆಗಾಲದ ವಿವಿಧ ಆಯಾಮಗಳು ಹಾಗೂ ಅದರ ಪರಿಣಾಮಗಳ ಪರಿಚಯ ಆಗಲಾರಂಭಿಸಿತು. ಚಿಕ್ಕಂದಿನಲ್ಲಿ ರಸ್ತೆಯಲ್ಲಿ ಹರಿಯುತ್ತಿದ್ದ ಮಳೆನೀರಿನ ಮೇಲೆ ನಡೆದು ಅಥವಾ ಸೈಕಲ್ ಓಡಿಸಿ ನೀರು ಚಿಮ್ಮಿಸುತ್ತಿದ್ದ ನನಗೆ ಈಗಲೂ ಅಕ್ಕಪಕ್ಕದಲ್ಲಿ ವಾಹನ ಅಥವಾ ಪಾದಚಾರಿಗಳಿಲ್ಲದಿದ್ದರೆ ಬಿಬಿಎಂಪಿ ಕೃಪಾಪೋಷಿತ ಹೊಂಡಗಳ ಮೇಲೆ ಕಾರು ಓಡಿಸಿ ನೀರು ಚಿಮ್ಮಿಸುವುದಕ್ಕೆ ಮಹದಾನಂದ! ಬಾಲ್ಯದಲ್ಲಿ ನಿರ್ಯೋಚನೆಯಿಂದ ಮಳೆಗಾಲವನ್ನು ಆನಂದಿಸುತ್ತಿದ್ದ ಮನಸ್ಸು ಈಗ ಬೆಂಗಳೂರಿನ ತೆರೆದ ಹೊಂಡಗಳು, ಬೀಳುವ ಮರಗಳು, ವಾಹನದಟ್ಟಣೆ ಇವುಗಳಿಂದಾಗಿ ಮಳೆ ಶುರುವಾದ ತಕ್ಷಣ ಮನೆಯವರು, ಬಂಧುಮಿತ್ರರು ಎಲ್ಲಿರುವರೋ, ಅಪ್ಪ ತೋಟದಿಂದ ಮನೆಗೆ ಮರಳಿದ್ದಾರೆಯೋ ಎಂದು ಚಿಂತಿಸುತ್ತದೆ.

ಮುಂಗಾರಿಗೆ ಮುನ್ನ ಹಿಂಗಾರಿನ ಹಿಮ್ಮೇಳ ಶುರುವಾಗಿದ್ದರೂ ಸಹ, ಕೇರಳಕ್ಕೆ ಮುಂಗಾರು ಇಂಥ ದಿನಾಂಕ ಬರಲಿದೆ ಎಂದು ನಿರೀಕ್ಷಣೆ ಮಾಡಲಾಗಿದೆ ಹಾಗೂ ಮುಂದಿನ 24 ಗಂಟೆಗಳಲ್ಲಿ ಕರ್ನಾಟಕಕ್ಕೆ ಕಾಲಿಡಲಿದೆ ಎಂದು ಪತ್ರಿಕೆಗಳಲ್ಲಿ ಓದಿದರೆ ಆತ್ಮೀಯರು ಬೇರೆ ಊರಿಂದ ನಮ್ಮಲ್ಲಿಗೆ ಬರುವುದನ್ನು ನಿರೀಕ್ಷಣೆ ಮಾಡುವಷ್ಟೇ ಕಾತರ ತುಂಬಿದ ಸಂಭ್ರಮ, ಸಂತಸ ಮನೆ ಮಾಡುತ್ತದೆ.

ಅಲ್ಲಿಂದ ಇಡೀ ಮಳೆಗಾಲ ಅಪ್ಪನ ಜೊತೆ ದಿನಾಲೂ ಮಳೆಯ ಬಗ್ಗೆ ಚರ್ಚಿಸುವುದು, ಎಲ್ಲೆಲ್ಲಿ ಮಳೆ ಹೇಗೆ ಆಗಿದೆ ಎಂದು ಮನೆಯವರಿಗೆ ದಿನಪತ್ರಿಕೆ ಓದಿ ಹೇಳುವುದು, ಅದರಲ್ಲೂ ತಲಕಾವೇರಿಯಲ್ಲಿ ಆಗುವ ಮಳೆಯ ಬಗ್ಗೆ ಗಮನವಿಡುವುದು, ಮೈಸೂರಿನಲ್ಲಿ ಮಳೆ ಆದರೂ ಕೆಆರ್‌ಎಸ್ ಯಾಕೆ ತುಂಬಿಲ್ಲ ಎಂದು ತಲೆ ಕೆಡಿಸಿಕೊಳ್ಳುವವರಿಗೆ ಕೊಡಗು/ತಲಕಾವೇರಿಯಲ್ಲಿ ಮಳೆಯಾದರೆ ಕೆಆರ್‌ಎಸ್ ತುಂಬುವುದು ಎಂದು ತಿಳಿಹೇಳುವುದು, ಯಾವ ಊರು, ದೇಶದಲ್ಲಿದ್ದರೂ ಕೃಷ್ಣಸಾಗರ ಜಲಾಶಯ ತುಂಬಿದೆಯೋ ಇಲ್ಲವೋ ಎಂದು ಪ್ರತಿದಿನ ಜಲಾಶಯದ ನೀರಿನ ಮಟ್ಟದ ವರದಿಯ ಕಡೆ ಗಮನವಿರಿಸಿ 'ಅಬ್ಬಾ! ನಿನ್ನ ತವರಿನ ಮೋಹವೇ!' ಎಂದು ಮನೆಯವರು, ಸ್ನೇಹಿತರಾದಿಯಾಗಿ ಎಲ್ಲರ ಕೈಲಿ ಛೇಡಿಸಿಕೊಳ್ಳುವುದು, ನಮ್ಮಲ್ಲಿ ಮಳೆ ಸ್ವಲ್ಪ ಕಡಿಮೆಯಾದರೆ ಬೇರೆ ರಾಜ್ಯಗಳ ಉದಾಹರಣೆ ತೋರಿ ಅಲ್ಲಿ ಅತಿವೃಷ್ಟಿ ಇಲ್ಲಿ ಅನಾವೃಷ್ಟಿ ಎಂದು ನಿಟ್ಟುಸಿರುಗರೆಯುವುದು, ಕರ್ನಾಟಕದ ನದಿ, ಜಲಾಶಯಗಳೆಲ್ಲ ತುಂಬಿ ಉಕ್ಕಿದಾಗ ಸಂಭ್ರಮಿಸುವುದು ಇವೆಲ್ಲ ಪ್ರತಿ ಮಳೆಗಾಲದಲ್ಲಿ ನನ್ನ ನಿತ್ಯಾಚರಣೆಗಳಾದರೆ, ಬಾಲ್ಯದಲ್ಲಿ ಮಳೆ ಬಂತು! ಮಳೆ ಬಂತು! ಎಂದು ಕಿರುಚುತ್ತಿದ್ದಷ್ಟೇ ಸಂಭ್ರಮದಿಂದ 'ನಮ್ಮೂರಲ್ಲಿ ಮಳೆ ಶುರು ಆಯ್ತು! ನಿಮ್ಮೂರಲ್ಲಿ?' ಎಂದು ಬಾಲ್ಯದ ಗೆಳೆಯ ಗೆಳತಿಯರು ವಾಟ್ಸ್ಆ್ಯಪ್‌ನಲ್ಲಿ ಹರಿಬಿಡುವ ಸಂದೇಶಗಳು, 'ಮಳೆ ಬರ್ತಾ ಇದ್ಯಾ ಅಮ್ಮ? ಮಳೆನೀರಿನ ನಳ ಬಾವಿಗೆ ಬಿಟ್ಟಿದೀರ ತಾನೆ?' ಎಂದು ಬರುವ ರಾಜಣ್ಣನ ದೂರವಾಣಿ ಸಂದೇಶ ಇವೆಲ್ಲ ನನ್ನ ಮಳೆಗಾಲದ ನಿತ್ಯ ನಿರೀಕ್ಷಣೆಗಳು.

ಶಿವರಾಮ ಕಾರಂತ ಹಾಗೂ ಕುವೆಂಪು ಪುಸ್ತಕಗಳಲ್ಲಿ ಮಳೆಯ, ಹಸಿರಿನ ಹಾಗೂ ಅವರು ಬೆಳೆದ ಪರಿಸರದ ವರ್ಣನೆ ಓದಿ ಬಹಳ ಪ್ರಭಾವಿತಳಾಗಿರುವ ನಾನು, ಈ ಮಹಾನ್ ಲೇಖಕರೆಲ್ಲ ಎಂಥೆಂಥ ಮಳೆಗಾಲಗಳನ್ನು ಕಂಡಿರಬಹುದು? ಅವರ ಊರು, ಮನೆಗಳ ಮಳೆಗಾಲದ ಅನುಭವ